**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**
**ದಿಃ25-06-2026**

**ಪಾಟೀ ಸವಾಲುಃ ದೂರುದಾರರ ಪರ ಶ್ರೀ ಎಸ್.ವೈ.ಪಿ.ವಕೀಲರಿಂದ**

ನಾನು ಪಿ.ಯು.ಸಿ.ವರೆಗೆ ವಿದ್ಯಾಬ್ಯಾಸ ಮಾಡಿದ್ದೇನೆ. ನಾನು ವ್ಯಾಪಾರ ಮತ್ತು ವ್ಯವಸಾಯ ಮಾಡುತ್ತೇನೆ. ಎತ್ತಿನಹೊಳೆ ಮೆಗಾ ಪ್ರಾಜೆಕ್ಟ್ ನಲ್ಲಿ ಆರೋಪಿಯು ಕೆಲಸ ಮಾಡುತ್ತಿದ್ದರು. ಸದರಿ ಎತ್ತಿನಹೊಳೆ ಯೋಜನೆಯಡಿಯಲ್ಲಿ ನನ್ನ ಜಮೀನೂ ಸಹ ಭೂಸ್ವಾಧೀನಪಡಿಸಲಾಗಿರುತ್ತದೆ. ಆ ಸಮಯದಲ್ಲಿ ನನಗೆ ಆರೋಪಿಯ ಪರಿಚಯ ಆಗಿರುತ್ತದೆ. ಎತ್ತಿನಹೊಳೆ ಮೆಗಾ ಕಂಪನಿಯಲ್ಲಿ ಅವರು ಏನು ಕೆಲಸ ಮಾಡುತ್ತಿದ್ದರು ಎಂದು ನನಗೆ ಸರಿಯಾಗಿ ಗೊತ್ತಿಲ್ಲ. ಎತ್ತಿನಹೊಳೆ ಮೆಗಾ ಕಂಪನಿಯಲ್ಲಿ ನಾನು ಪಾರೆಸ್ಟ್ ಕಂಟ್ರಾಕ್ಟರ್ ಆಗಿದ್ದೆ. ಮರ ಕಡಿಯುವಂತಹ ಕಂಟ್ರಾಕ್ಟ್ ನ್ನು ನನಗೆ ಕೊಡುತ್ತಿದ್ದರು. ನನಗೂ ಮತ್ತು ಆರೋಪಿಗೂ ಎತ್ತಿನಹೊಳೆ ಮೆಗಾ ಕಂಪನಿಯಲ್ಲಿ ವ್ಯವಹಾರಿಕ ಸಂಬಂಧ ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ವ್ಯವಹಾರಿಕ ಸಂಬಂಧ ಇರಲಿಲ್ಲ, ಪರಿಚಯ ಇತ್ತು ಎಂದು ನುಡಿಯುತ್ತಾರೆ. ಆರೋಪಿ ಅಂದಿನಿಂದ ಇಲ್ಲಿಯವರೆಗೂ ಏನೆಲ್ಲಾ ವ್ಯವಹಾರ ಮಾಡಿದ್ದಾರೆ ಎಂದು ಎಲ್ಲಾ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ.

ಯಾವ ದಿನಾಂಕದಂದು ಎಲ್ಲಿ ಯಾರ ಸಮಕ್ಷಮ ಆರೋಪಿ ಮತ್ತು ಪಿರ್ಯಾದುದಾರರು ಬೋಗ್ಯ ಕರಾರನ್ನು ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕರಾರಿನ ಪ್ರಕಾರ ಯಾವ ದಿನಾಂಕದಂದು ಆರೋಪಿಗೆ ಪಿರ್ಯಾದುದಾರರು ಮನೆ ಬಿಟ್ಟು ಕೊಡಬೇಕಾಗಿತ್ತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 2018ರಲ್ಲಿ ಆರೋಪಿ ಕರಾರು ವಿಚಾರವಾಗಿ ನನಗೆ ಹೇಳಿದ ನಂತರವೇ ನನಗೆ ಗೊತ್ತಾಗಿರುತ್ತದೆ. ಪಿರ್ಯಾದುದಾರರ ಮನೆ 4 ಅಂತಸ್ತಿನ ಮನೆಯಾಗಿರುತ್ತದೆ. 2ನೇ ಅಂತಸ್ತಿನಲ್ಲಿದ್ದ ಡ್ಯೂಪ್ಲೆಕ್ಸ್ ಮನೆಯಲ್ಲಿ ಪಿರ್ಯಾದುದಾರರು ವಾಸವಾಗಿದ್ದು, ನಾವು ಸದರಿ ಮನೆಗೆ ಹೋಗಿರುತ್ತೇವೆ. ಯಾವ ದಿನಾಂಕದಂದು ಪಿರ್ಯಾದುದಾರರ ಮನೆಗೆ ಹೋಗಿರುತ್ತೇವೆ ಎಂದು ನೆನಪಿಲ್ಲ. ಸದರಿ ದಿನ ನಾನು, ಆರೋಪಿ, ಗೋಪಿನಾಥ್, ಸುರೇಶ ಮತ್ತು ಹರೀಶ್ ಎನ್ನುವವರು ಒಟ್ಟಿಗೆ ಪಿರ್ಯಾದುದಾರರ ಮನೆಗೆ ಹೋಗಿದ್ದೆವು. ಆರೋಪಿ ಯಾವ ಬ್ಯಾಂಕಿಗೆ ಸೇರಿದ ಚೆಕ್ಕನ್ನು ನೀಡಿದ್ದರು ಮತ್ತು ಅದರ ಚೆಕ್ ಸಂಖ್ಯೆ ನನಗೆ ಗೊತ್ತಿಲ್ಲ. ಪಿರ್ಯಾದುದಾರರು

ವಾಸವಾಗಿರುವುದು ಟ್ರಿಪ್ಲೆಕ್ಸ್ ಮನೆಯಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನು, ಆರೋಪಿ, ಗೋಪಿನಾಥ್, ಸುರೇಶ ಮತ್ತು ಹರೀಶ್ ರವರು ಪಿರ್ಯಾದುದಾರರ ಮನೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಆರೋಪಿಯು ಒಂದೇ ಕಂಪನಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ನನ್ನ ಮತ್ತು ಆರೋಪಿಯ ನಡುವೆ ವ್ಯವಹಾರಿಕ ಸಂಬಂಧ ಇರುವುದರಿಂದ ಆರೋಪಿಗೆ ಸಹಾಯ ಮಾಡಬೇಕು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೆ ಕೇ ಸ ಇ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**